# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

### ಎಸ್.ಸಿ. ನಂ. 36/2014

**ದೋ.ಸಾ. : 46 ಪ್ರಾ.ಸಾ. : 22**

| | | |
|---|---|---|
| ಸಾಕ್ಷಿಯ ಹೆಸರು | : | ರಾಮದಾಸ ನಾಗಪ್ಪ ಕುತ್ತಳಕರ |
| ತಂದೆಯ ಹೆಸರು | : | ನಾಗಪ್ಪ ಕುತ್ತಳಕರ |
| ವಯಸ್ಸು | : | 68 ವರ್ಷ |
| ಕೆಲಸ | : | ನಿವೃತ್ತ ಎ.ಆರ್.ಎಸ್.ಐ |
| ವಾಸ | : | ಆವರ್ಸಾ, ತಾಃ ಅಂಕೋಲಾ |

**ದಿನಾಂಕಃ 18-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿಃ 19-02-1991 ರಿಂದ ದಿಃ 31-05-2017 ರ ವರೆಗೆ ನಾನು ಕಾರವಾರದ ಎಸ್.ಪಿ ಕಚೇರಿಯ ಜಿಲ್ಲಾ ವೈಜ್ಞಾನಿಕ ಸಹಾಯಕ ಘಟಕದಲ್ಲಿ ಇಲಾಖಾವತಿಯಿಂದ ಪೋಟೋಗ್ರಾಫರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಕ್ಯಾಮೇರಾಗಳನ್ನು ಬಳಸಿ ಫೋಟೋ ತೆಗೆಯುವ ಹಾಗೂ ವಿಡಿಯೋ ಮಾಡುವ ಬಗ್ಗೆ ಬೆಂಗಳೂರಿನ ಕಮಿಷನರ್ ಕಚೇರಿಯಲ್ಲಿರುವ ಪೋಟೋಗ್ರಾಫಿ ವಿಭಾಗದಲ್ಲಿ 45 ದಿನಗಳು ಹಾಗೂ ಬೆಂಗಳೂರಿನ ಎಫ್.ಎಸ್.ಎಲ್ ನ ಪೋಟೋಗ್ರಾಫಿ ವಿಭಾಗದಲ್ಲಿ 15 ದಿನಗಳ ತರಬೇತಿಯನ್ನು ಪಡೆದಿರುತ್ತೇನೆ. ಈ ಬಗ್ಗೆ ತರಬೇತಿ ಪ್ರಮಾಣ ಪತ್ರವನ್ನು ನೀಡಿದ್ದು, ಅದು ನಮ್ಮ ಸೇವಾ ಪುಸ್ತಕದಲ್ಲಿ ದಾಖಲಾಗಿರುತ್ತದೆ.

2. ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿಃ 15-02-2014 ರಂದು ಕದ್ರಾ ಪೊಲೀಸರು ನಮ್ಮ ಕಚೇರಿಗೆ ಪತ್ರ ಮೂಲಕ ಇಲಾಖೆಯ ಪೋಟೋಗ್ರಾಫರ್ ನ್ನು ಈ ಪ್ರಕರಣದ ಘಟನಾ ಸ್ಥಳಗಳ ಪೋಟೋಗಳನ್ನು ತೆಗೆಯಲು ಕಳುಹಿಸುವಂತೆ ಕೋರಿಕೊಂಡ ಮೇರೆಗೆ, ನಮ್ಮ ಕಚೇರಿಯ ಪಿ.ಎಸ್.ಐ ರವರು ನನಗೆ ಘಟನಾ ಸ್ಥಳಕ್ಕೆ ತೆರಳಿ, ಪಂಚನಾಮೆ ಮಾಡುವ ಕಾಲಕ್ಕೆ ಘಟನಾ ಸ್ಥಳದಲ್ಲಿ ಹಾಜರಿದ್ದು, ಪೋಟೋ ತೆಗೆದು ಹಾಗೂ ವಿಡಿಯೋ ಮಾಡುವಂತೆ ಸೂಚಿಸಿದ ಮೇರೆಗೆ, ನಾನು ಆ ದಿನ ಬೆಳಿಗ್ಗೆ ನಮ್ಮ ಕಚೇರಿಯಲ್ಲಿದ್ದ 405 ಮೆಗಾ ಪಿಕ್ಸಲ್ ನ ಸೋನಿ

ಹ್ಯಾಂಡಿ ಕ್ಯಾಮೆರಾವನ್ನು ತೆಗೆದುಕೊಂಡು ಕದ್ರಾದ ರಾಜೀವ ನಗರಕ್ಕೆ ಹೋಗಿದ್ದು, ಅಲ್ಲಿ ಪೊಲೀಸರು ಘಟನಾ ಸ್ಥಳಗಳಲ್ಲಿ ಪಂಚನಾಮೆ ಮಾಡುವ ಕಾಲಕ್ಕೆ ನಾನು ತೆಗೆದುಕೊಂಡು ಹೋಗಿದ್ದು, ಅಲ್ಲಿ ತನಿಖಾಧಿಕಾರಿಗಳು ಸೂಚಿಸಿದ ಸ್ಥಳಗಳಲ್ಲಿ ಹ್ಯಾಂಡಿ ಕ್ಯಾಮೆರಾದಿಂದ ಪೋಟೋ ತೆಗೆದಿರುತ್ತೇನೆ ಹಾಗೂ ವಿಡಿಯೋ ಮಾಡಿರುತ್ತೇನೆ. ನಾನು ಪೋಟೋ ತೆಗೆದು ವಿಡಿಯೋ ಮಾಡಿದ ಸ್ಥಳಗಳ ಪೈಕಿ ಮನೆಯಲ್ಲಿ ಒಂದು ಹುಡುಗಿಯ ಶವ ಇದ್ದು, ಅದನ್ನು ನಾನು ಪೋಟೊ ತೆಗೆದಿರುತ್ತೇನೆ. ಅದೇ ರೀತಿ ಮನೆಯಲ್ಲಿ ಹಾಗೂ ಮನೆಯ ರೂಮ್ ನಲ್ಲಿ ರಕ್ತ ಹರಡಿದ್ದನ್ನು ವಿಡಿಯೋ ಮಾಡಿರುತ್ತೇನೆ. ಆ ನಂತರ ಸದರಿ ಮನೆಯಿಂದ ಕಾಡಿಗೆ ಹೋಗುವ ಕಾಲು ದಾರಿಯಲ್ಲಿ 2 ಶವಗಳು ಸ್ವಲ್ಪ ಅಂತರದಲ್ಲಿ ಬಿದ್ದಿದ್ದು, ಅಲ್ಲಿಯೂ ಸಹ ಪೋಟೋ ತೆಗೆದು, ವಿಡಿಯೋ ಮಾಡಿರುತ್ತೇನೆ. ಸಾಕ್ಷಿಯು ತಾನು ಪಂಚನಾಮೆ ಸಮಯದಲ್ಲಿ ತೆಗೆದ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-3 ರಿಂದ 16 ಎಂದು ಗುರುತಿಸಲಾಗಿರುತ್ತದೆ.

3. ಆ ನಂತರ ನಮ್ಮ ಪೊಲೀಸರು ಮೃತ ದೇಹಗಳನ್ನು ಕಾರವಾರದ ಸರಕಾರಿ ಆಸ್ಪತ್ರೆಗೆ ತಂದಿದ್ದು, ಅಲ್ಲಿ ಶವ ತನಿಖಾ ಸಮಯದಲ್ಲಿ ತನಿಖಾಧಿಕಾರಿಗಳು ಸೂಚಿಸಿದಂತೆ ಪೋಟೋಗಳನ್ನು ತೆಗೆದಿರುತ್ತೇನೆ ಹಾಗೂ ವಿಡಿಯೋ ಮಾಡಿರುತ್ತೇನೆ. ಸಾಕ್ಷಿಯು ಶವ ತನಿಖಾ ಸಮಯದಲ್ಲಿ ತೆಗೆದ ಒಟ್ಟು 12 ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳ ಪೈಕಿ 7 ಪೋಟೋಗಳನ್ನು ಈಗಾಗಲೇ ನಿಪಿ-18, 19, 37, 38, 39, 40, 41 ಎಂದು ಗುರುತಿಸಲಾಗಿದ್ದು, ಇನ್ನುಳಿದ 5 ಪೋಟೋಗಳನ್ನು ನಿಪಿ-57 ರಿಂದ 61 ಎಂದು ಗುರುತಿಸಲಾಯಿತು.

4. ದಿಃ 18-02-2014 ರಂದು ಆರೋಪಿ ಕರೆದುಕೊಂಡು ಹೋದ ಸ್ಥಳದಲ್ಲಿ ಪೊಲೀಸರು ಪಂಚನಾಮೆಯನ್ನು ಮಾಡಿದ್ದು, ಅಲ್ಲಿಯೂ ಸಹ ತನಿಖಾಧಿಕಾರಿ ಸೂಚಿಸಿದಂತೆ, ಪೋಟೋ ತೆಗೆದು, ವಿಡಿಯೋ ಮಾಡಿರುತ್ತೇನೆ. ಸಾಕ್ಷಿಯು ತಾನು ತೆಗೆದ ಒಟ್ಟು 11 ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-25 ರಿಂದ 35 ಎಂದು ಗುರುತಿಸಲಾಗಿರುತ್ತದೆ. ನಾನು ಮೇಲೆ ಹೇಳಿದ ಸ್ಥಳಗಳಲ್ಲಿ ಪೋಟೋಗಳನ್ನು ತೆಗೆದು ವಿಡಿಯೋ ಮಾಡಿದ ನಂತರ ಅವುಗಳನ್ನು ಠಾಣೆಯ ಕಂಪ್ಯೂಟರ್ ಮೂಲಕ ಪೆನ್ ಡ್ರೈವ್ ಗೆ ವರ್ಗಾಯಿಸಿ ಹಾಗೂ ವಿಡಿಯೋಗಳನ್ನು ಸಿಡಿ ಮಾಡಿರುತ್ತೇನೆ. ನಂತರ

ಪೋಟೋಗಳನ್ನು ಲಕ್ಷ್ಮಿ ಪೋಟೋ ಲ್ಯಾಬ್ ನಲ್ಲಿ ಪ್ರಿಂಟ್ ಮಾಡಿಸಿ, ಅವುಗಳನ್ನು ಕಲಂ 65(ಬಿ) ಪ್ರಮಾಣ ಪತ್ರ ಹಾಗೂ ಸಿ.ಡಿ ಯೊಂದಿಗೆ ತನಿಖಾಧಿಕಾರಿಗೆ ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ಕಲಂ 65(ಬಿ) ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-62 ಎಂದು, ಸಾಕ್ಷಿಯ ಸಹಿಯನ್ನು ನಿಪಿ-62(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ತಾನು ನೀಡಿದ ಸಿ.ಡಿಯನ್ನು ನೋಡಿ ಗುರುತಿಸಿದ್ದು, ಅದು ತುಂಡಾಗಿರುವ ಕಾರಣ ಸದರಿ ಸಿಡಿಯನ್ನು ನಿಶಾನೆಗೊಳಿಸಿರುವುದಿಲ್ಲ. ಈ ಪ್ರಕರಣದಲ್ಲಿ ಪೋಟೋ ತೆಗೆದು, ವಿಡಿಯೋ ಮಾಡಿ, ತನಿಖೆಗೆ ಸಹಾಯ ಮಾಡಿದ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ</u>**

5. ನಾನು ದಿಃ 15-02-2014 ರಂದು ಬೆಳಿಗ್ಗೆ 06-45 ಗಂಟೆಗೆ ರಾಜೀವ ನಗರದ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಅಲ್ಲಿ ಸುಮಾರು ಅರ್ಧ ಗಂಟೆ ಇರುತ್ತೇನೆ. ಶವ ತನಿಖೆ ಮಾಡಿದ ಸಮಯ ಹಾಗೂ ಅಲ್ಲಿ ಎಷ್ಟು ಸಮಯ ಇದ್ದೆ ಎಂದು ನನಗೆ ನೆನಪಿಲ್ಲ. ದಿಃ 18-02-2014 ರಂದು ಆರೋಪಿ ತೋರಿಸಿದ ಸ್ಥಳಕ್ಕೆ ಹೋದಾಗ ಎಷ್ಟು ಸಮಯವಾಗಿತ್ತು ಎಂದು ನನಗೆ ನೆನಪಿಲ್ಲ. ಅಲ್ಲಿ ಎಷ್ಟು ಹೊತ್ತು ಇದ್ದೆವು ಎಂದು ನನಗೆ ನೆನಪಿಲ್ಲ. ನಾನು ಅಪರಾಧ ಸ್ಥಳಗಳ ಪೋಟೋ ತೆಗೆಯುವ ತರಬೇತಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಘಟನಾ ಸ್ಥಳಗಳಿಗೆ ಹೋದ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸಾಕ್ಷಿಯು ಪೋಟೋಗಳು ಇರುತ್ತವೆ ಎಂದು ನುಡಿಯುತ್ತಾರೆ. ನಾನು ತೆಗೆದ ಪೋಟೋಗಳಲ್ಲಿ ದಿನಾಂಕ ಮತ್ತು ಸಮಯ ನಮೂದಾಗಿಲ್ಲ ಎಂದರೆ ಸರಿ. ಸೋನಿ ಹ್ಯಾಂಡಿ ಕ್ಯಾಮೇರಾದಿಂದ ಪೋಟೋ ತೆಗೆದರೆ ದಿನಾಂಕ ಮತ್ತು ಸಮಯ ಬರುತ್ತದೆ ಎಂದರೆ ಸಾಕ್ಷಿಯು ಪೋಟೋ ತೆಗೆಯುವಾಗ ಕ್ಯಾಮೇರಾದ ಸ್ಕ್ರಿನ್ ಮೇಲೆ ಕಾಣುತ್ತದೆ, ಆದರೆ ಪೋಟೋಗಳಲ್ಲಿ ಬರುವುದಿಲ್ಲ ಎಂದು ನುಡಿಯುತ್ತಾರೆ. ಕ್ಯಾಮೇರಾಗಳಲ್ಲಿ ಪೋಟೋಗಳ ಮೇಲೆ ದಿನಾಂಕ ಮತ್ತು ಸಮಯ ಮೂಡುವಂತೆ ಕ್ಯಾಮೇರಾಗಳಲ್ಲಿ ಸೆಟಿಂಗ್ ಮಾಡಲು ಬರುತ್ತದೆ ಎಂದರೆ ಸರಿ.

6. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಯಾವ ಕಂಪನಿಯ ಕ್ಯಾಮೇರಾ, ಕಂಪ್ಯೂಟರ್, ಪೆನ್ ಡ್ರೈವ್ ಮತ್ತು ಪ್ರಿಂಟರ್ ಬಳಸಿದ್ದೇನೆ ಹಾಗೂ ಯಾವ ಲ್ಯಾಬ್ ನಲ್ಲಿ ಪ್ರಿಂಟ್ ಮಾಡಿಸಿರುತ್ತೇನೆ ಎಂದು ನಮೂದಿಸಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ-62 ಕಲಂ 65(ಬಿ)

ಪ್ರಮಾಣ ಪತ್ರದಲ್ಲಿಯೂ ಸಹ ಕ್ಯಾಮೇರಾ, ಕಂಪ್ಯೂಟರ್, ಪೆನ್ ಡ್ರೈವ್ ಮತ್ತು ಪ್ರಿಂಟರ್ ನ ಮಾಡೆಲ್ ನಂಬರ್ ಮತ್ತು ಕಂಪನಿಯ ಹೆಸರುಗಳನ್ನು ನಮೂದಿಸಿಲ್ಲ ಎಂದರೆ ಸರಿ. ನಾನು ಪೋಟೋಗಳನ್ನು ಪ್ರಿಂಟ್ ಮಾಡಿಸಿದ ಲಕ್ಷ್ಮೀ ಲ್ಯಾಬ್ ನವರ ಹೆಸರು ನನಗೆ ನೆನಪಿಲ್ಲ. ಅಲ್ಲಿ ಸುಮಾರು 4-5 ಜನರು ಕೆಲಸ ಮಾಡುತ್ತಾರೆ. ಅಲ್ಲಿ ಯಾರು ಪೋಟೋಗಳನ್ನು ಪ್ರಿಂಟ್ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-62 ಕಲಂ 65(ಬಿ) ಪ್ರಮಾಣ ಪತ್ರ ನಿಯಮಾನುಸಾರ ಇಲ್ಲ ಹಾಗೂ ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದ ಯಾವುದೇ ಘಟನಾ ಸ್ಥಳಗಳಿಗೆ ತೆರಳಿಲ್ಲ ಹಾಗೂ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದಲ್ಲಿ ತೋರಿಸಿದ ಪೊಟೋಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ